ಇ) ಸಾರಿಗೆ ಸಂಚಾರ ಸುಗಮವಾಗಬೇಕಾದಲ್ಲಿ, ಅಫಜಲಪುರ ನಗರದ ಸುತ್ತಲೂ ವರ್ತುಲ ರಸ್ತೆಯ ಅವಶ್ಯಕತೆಯಿರುವುದು ಸರ್ಕಾರ ಮನಗಂಡಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ವರ್ತುಲ ರಸ್ತೆ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಹೌದು.

ಆ) ಹೌದು.

ಇ) ಹೌದು.

ಈ) ಹೌದು.

ಅನುದಾನ ಲಭ್ಯತೆಯನುಸಾರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಗಣಿಸಲಾಗುವುದು.

440 (147) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) :– ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್.ಡಿ.ಸಿ.ಎಲ್. ನಿಂದ ಮುಂಡರಗಿ ಕ್ಷೇತ್ರದಲ್ಲಿ ಪ್ರಾರಂಭವಾಗದಿರುವ ಸೇತುವೆಗಳನ್ನು ವಿನ್ಯಾಸ ತಯಾರಿಸಿದ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದೆಂದು ತಿಳಿಸಿರುವುದು ನಿಜವಲ್ಲವೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು):

ಅ) ಹೌದು.

ಆ) ಮೂರನೇ ಹಂತದಲ್ಲಿ ಕೈಗೊಂಡಿರುವ ಸೇತುವೆಗಳ ಪೈಕಿ ಎರಡು ಕಾಮಗಾರಿಗಳು ಪ್ರಗತಿಯಲ್ಲಿವೆ. ಇನ್ನೊಂದು ಕಾಮಗಾರಿಯನ್ನು ಮಳೆಗಾಲದ ನಂತರ ಪ್ರಾರಂಭಿಸಲಾಗುವುದು.

441 (148) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಿಂದ ನಡೆಯತಕ್ಕಂತಹ ರಸ್ತೆ ಕಾಮಗಾರಿಗಳಲ್ಲಿ ಖಡಿ ಹಾಗೂ ಮುರಾಮಿನ ಕಟ್ಟೆ ಹಾಕಿ ಅಳತೆ ಮಾಡಿ ಕೆಲಸ ಮಾಡುವ ಪದ್ಧತಿ ಇದೆಯೇ;

ಆ) ಈ ಪದ್ಧತಿ ಹಿಂದಿನಿಂದ ಇದ್ದು ಈಗ ಅದನ್ನೆ ತೆಗೆದಿದ್ದರೆ ಕಾರಣಗಳೇನು;

ಇ) ಹಿಂದಿನ ಈ ಪದ್ಧತಿಯನ್ನು ತೆಗೆದಿದ್ದರಿಂದ ಕಳಪೆ ಕಾಮಗಾರಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇದನ್ನು ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಪ್ರಸಕ್ತದಲ್ಲಿ ಈ ಪದ್ಧತಿ ಇರುವುದಿಲ್ಲ.

ಆ) ಎಂ.ಓ.ಆರ್.ಟಿ.ಹೆಚ್. (Ministry of Road Transport and Highways) ವತಿಯಿಂದ ಹೊರಡಿಸಲಾದ ಪರಿಷ್ಕರಿಸಿದ ಕಾಮಗಾರಿಯ ವಿಶಿಷ್ಟ ವಿವರಣೆಯಂತೆ ಹಿಂದಿನ ಪದ್ಧತಿಯನ್ನು ತೆಗೆದು ಹಾಕಲಾಗಿದೆ.

ಇ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

442 (149) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) :– ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ಕ್ಷೇತ್ರದಲ್ಲಿ ಈ ಕೆಳಕಂಡ ರಸ್ತೆಗಳಲ್ಲಿ ಸೇತುವೆ ಕಾಮಗಾರಿಗಳು ಅತೀ ಅವಶ್ಯವಿರುವುದು ನಿಜವಲ್ಲವೆ;

1) ಗದಗ ತಾಲ್ಲೂಕು ಹಾತಲಗೇರಿ–ಲಕ್ಕುಂಡಿ ರಸ್ತೆಯ ಕಿ.ಮೀ 3.00 ರಲ್ಲಿ ಹದ್ದಿಗಳ್ಳಿ ಸೇತುವೆ ನಿರ್ಮಾಣ

2) ಮುಂಡರಗಿ ತಾಲ್ಲೂಕು ದುಂದೂರ–ಬಿದರಹಳ್ಳಿ ರಸ್ತೆಯ ಕಿ.ಮೀ 63.15 ರಲ್ಲಿ ಸೇತುವೆ ನಿರ್ಮಾಣ

3) ಮುಂಡರಗಿ ತಾಲ್ಲೂಕು ದುಂದೂರ–ಬಿದರಹಳ್ಳಿ ರಸ್ತೆಯ ಕಿ.ಮೀ 72.30ರಲ್ಲಿ ಸೇತುವೆ ನಿರ್ಮಾಣ

4) ಗದಗ ತಾಲ್ಲೂಕು ಕಳಸಾಪೂರ–ಮಹಾಲಿಂಗಾಪುರ ರಸ್ತೆಯ ಕಿ.ಮೀ 4.00ರಲ್ಲಿ ಸೇತುವೆ ನಿರ್ಮಾಣ